



‘ಅಶೋಕ ಸಾಲು ಮರಗಳನ್ನು ನೆಡಿಸಿದನು’ ಎನ್ನುವುದು ನಮ್ಮ ಪಠ್ಯದಲ್ಲಿನ ಸಾಲು. ಸಾಲು ಮರಗಳ ಕುರಿತ ಈ ಸಾಲು, ಅಶೋಕ ಚಕ್ರವರ್ತಿ ಸಾಲು ಮರಗಳನ್ನು ನೆಡಿಸಿದ ಎನ್ನುವುದನ್ನಷ್ಟೇ ಹೇಳುತ್ತಿಲ್ಲ; ಸಾಲು ಮರಗಳನ್ನು ನೆಡಿಸುವುದು ರಾಜನೊಬ್ಬನ ಕರ್ತವ್ಯ ಎನ್ನುವ ಸಾಮಾಜಿಕ ಸತ್ಯವನ್ನೂ ಹೇಳುತ್ತಿದೆ; ರಾಜರುಗಳು ಸಾಲು ಮರಗಳನ್ನು ನೆಡಿಸಿದರೆ, ಪ್ರಜೆಗಳು ಒಂದೆರಡು ಮರಗಳನ್ನಾದರೂ ಬೆಳೆಸಬೇಕು ಎನ್ನುವ ನಾಗರಿಕ ಜವಾಬ್ದಾರಿಯನ್ನೂ ಧ್ವನಿಸುತ್ತಿದೆ.

ಕಾಲ ಹೇಗೆ ಬದಲಾಗಿದೆ ನೋಡಿ. ‘ಕೆರೆಗಳನ್ನು ಕಟ್ಟಿಸು’ ಎಂದು ವಿಜಯನಗರ ಸಾಮ್ರಾಜ್ಯದಲ್ಲಿದ್ದ ತಾಯಿಯೊಬ್ಬಳು ಹೇಳಿದಳು. ಅಶೋಕನಂತೆ ರಾಜರುಗಳೆಲ್ಲ ಸಾಲು ಮರಗಳನ್ನು ಬೆಳೆಸುವ ಕೆಲಸವನ್ನು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಮಾಡಿಯೇ ಇದ್ದಾರೆ. ಈಗ ಅಧಿಕಾರದಲ್ಲಿ ಇರುವವರು ಹಾಗೂ ಆ ಅಧಿಕಾರವ್ಯವಸ್ಥೆಯನ್ನು ರೂಪಿಸುವ ಪ್ರಜೆಗಳಾದ ನಾವು ಏನನ್ನು ಮಾಡುತ್ತಿದ್ದೇವೆ? ವ್ಯತ್ಯಾಸ ಕಣ್ಣಿಗೆ ಕಾಣುವಂತೆಯೇ ಇದೆ: ಇದು ಸಾಲುಮರಗಳನ್ನು ನೆಡಿಸುವ ಕಾಲವಲ್ಲ; ಕಡಿಸುವ ಕಾಲ. ಕೆರೆಗಳನ್ನು ಕಟ್ಟಿಸುವುದು ಇವತ್ತಿನ ಪರಂಪರೆಯಲ್ಲ; ಇರುವ ಕೆರೆಗಳನ್ನು ನುಂಗಿ, ಬಡಾವಣೆಗಳ ರೂಪದಲ್ಲಿ ಉಗುಳುವ ದಿನಗಳಿವು. ಅಂದರೆ, ಪರಿಸರ ಹಾಗೂ ಸಮಾಜದ ಆರೋಗ್ಯಕ್ಕೆ ಪೂರಕವಾಗಿ ‘ಕನ್ನಡ ವಿವೇಕ ಪರಂಪರೆ’ ಒಂದು ಮಾದರಿಯನ್ನು ನಮಗೆ ಕಟ್ಟಿಕೊಟ್ಟಿತ್ತಲ್ಲ; ಆ ಮಾದರಿಯನ್ನೀಗ ನಾವು ಬುಡಮೇಲಾಗಿಸಿದ್ದೇವೆ. ಭಸ್ಮಾಸುರ ಪರಂಪರೆಯ ವಾರಸುದಾರರು ನಾವು.

## ಮಳೆ ಬಂದ ಕಾಲಕ್ಕೆ...

ಪರಿಸರ ಪ್ರಜ್ಞೆಯ ಬಗೆಗಿನ ನಮ್ಮ ಅಜ್ಞಾನ ಅಥವಾ ನಿರ್ಲಕ್ಷ್ಯಕ್ಕೆ ‘ಮಳೆಗಾಲ’ ಒಳ್ಳೆಯ ಉದಾಹರಣೆ. ಪ್ರತಿ ಬೇಸಿಗೆಯಲ್ಲೂ, ಧಗೆಗೆ ಕಂಗೆಟ್ಟು, ಕುಡಿಯುವ ನೀರಿಗೂ ತತ್ವಾರವಾಗಿ, ಮಳೆರಾಯನ ಆಗಮನಕ್ಕೆ ಹಂಬಲಿಸುತ್ತೇವೆ. ಆದರೆ, ಮಳೆ ಕಣ್ಣು ತೆರೆದ ಮೇಲಿನ ಸ್ಥಿತಿಯೇನು?

ಇತ್ತೀಚಿನ ವರ್ಷಗಳಲ್ಲಿನ ಮಳೆದಿನಗಳನ್ನು ನೆನಪಿಸಿಕೊಳ್ಳಿ. ಮೊದಲ ಮಳೆಗೇ ನಗರಗಳು ಕಂಗೆಟ್ಟು ಕಣ್ಣೀರಾಗುತ್ತಿವೆ. ಮಳೆ ನೀರು ನೆರೆಯಾಗಿ, ಮನೆಗಳಿಗೆ ನುಗ್ಗುತ್ತದೆ. ಬೆಂಗಳೂರಿನಂಥ ಮಹಾನಗರಗಳ ಕೆಲವು ಬಡಾವಣೆಗಳು ದ್ವೀಪಗಳ ಸ್ವರೂಪ ಪಡೆದುಕೊಳ್ಳುತ್ತವೆ. ರಸ್ತೆಗಳು ಹೊಳೆಗಳ ಸ್ವರೂಪ ತಳೆಯುತ್ತವೆ. ಮೋರಿಯಲ್ಲಿ ಯಾರೋ ಕೊಚ್ಚಿಹೋದರೆ ಅದು ಅಚ್ಚರಿಯೆಂದು ಯಾರಿಗೂ ಅನ್ನಿಸುವುದಿಲ್ಲ.

ಕರಾವಳಿ, ಕೊಡಗಿನಲ್ಲಿ ಬೇರೆಯದೇ ಸ್ಥಿತಿ. ಯಾವ ಗುಡ್ಡ ಯಾವಾಗ ಕುಸಿದೀತು, ಸೇತುವೆ ಮುರಿದುಬಿದ್ದೀತು, ರಸ್ತೆ ಕೊಚ್ಚಿಹೋದೀತು – ಹೀಗೆ ಮಳೆಗಾಲದುದ್ದಕ್ಕೂ ಒಂದಲ್ಲಾ ಒಂದು ಆತಂಕ. ಗುಡ್ಡಗಳು ಕುಸಿಯುವುದು, ಬದುಕು ಮಣ್ಣಾಗುವುದು ಈಗ ಸಹಜ ಎನ್ನುವಂತಾಗಿದೆ.

ಮಳೆ ಬಂದರೆ ನಮಗೆ ಸಹಜವಾಗಿ ಸಂತೋಷವಾಗಬೇಕು. ಆದರೆ, ಮಳೆ ಹಲವರಿಗೆ ಕಿರಿಕಿರಿ ಎನ್ನಿಸುತ್ತಿರುವ ದಿನಗಳಿವು.

ಮಳೆ ಬಂದಾಗ ನಮ್ಮ ನಾಗರಿಕ ಪ್ರಜ್ಞೆ ಎಚ್ಚತ್ತುಕೊಳ್ಳುತ್ತದೆ. ಸರ್ಕಾರದ ಹೊಣೆಗೇಡಿತನದ ಬಗ್ಗೆ ಆಕ್ರೋಶದಿಂದ ಮಾತನಾಡುತ್ತೇವೆ. ಹೌದು, ಸರ್ಕಾರಗಳ ಹೊಣೆಗೇಡಿತನಕ್ಕೆ ಮದ್ದಿಲ್ಲ ಎನ್ನುವಂತಾಗಿದೆ. ಆದರೆ, ಮಳೆ ಕಾರಣದಿಂದಾಗಿ ಸಂಭವಿಸುತ್ತಿರುವ ದುರಂತಗಳಲ್ಲಿ ನಮ್ಮ ಪಾತ್ರವೇನೂ ಇಲ್ಲವೆ? ನಾವು ನೆಚ್ಚಿರುವ ನಾಗರಿಕತೆ, ಜೀವನವಿಧಾನ, ನಂಬಿಕೆಗಳು – ಇವೆಲ್ಲವೂ ನಮ್ಮ ಹೊಣೆಗಾರಿಕೆಯಲ್ಲಿನ ಲೋಪವನ್ನು ಬೆಟ್ಟು ಮಾಡಿ ತೋರಿಸುವಂತಿವೆ.

ನಗರ ಪ್ರದೇಶಗಳಲ್ಲಿ ಅಂಗುಲ ಅಂಗುಲಕ್ಕೂ ಮೌಲ್ಯ. ಜೀವನದ ಗಳಿಕೆಯನ್ನು ಸುರಿದು ಸಂಪಾದಿಸಿದ ಮನೆಯ ಸುತ್ತಮುತ್ತ ಸ್ವಲ್ಪ ಮಣ್ಣಿದ್ದರೂ ಆಧುನಿಕರೆನ್ನಿಸಿಕೊಂಡ ನಮಗೆ ಕಿರಿಕಿರಿ. ಇರುವ ಜಾಗಕ್ಕೆಲ್ಲ ಕಲ್ಲು ಹಾಸುತ್ತೇವೆ, ಕಾಂಕ್ರೀಟು ಮೆತ್ತುತ್ತೇವೆ. ಮಳೆಯ ನೀರು ಮನೆಯ ಮುಂದೆ ನಿಂತರೆ ನಮಗೆ ತೊಂದರೆ ಎನ್ನಿಸುತ್ತದೆ. ಮರಗಿಡಗಳ ಜೊತೆಗೂ ನಮಗೆ ಸಖ್ಯವಿಲ್ಲ. ನಾವು ಮರಗಳನ್ನು ಬೆಳೆಸುವ ಮಾತಿರಲಿ, ಯಾರೋ ಪುಣ್ಯಾತ್ಮರು ನೆಟ್ಟು ಪೋಷಿಸಿದ ಮರಗಿಡಗಳಿಗೂ ನಮ್ಮ ಭಸ್ಮಾಸುರ ಹಸ್ತ ತಾಗಿದೆ. ಮನೆಯ ಅಂದಕ್ಕೆ ಅಡ್ಡಿ ಎಂದು ರಸ್ತೆಯಲ್ಲಿನ ಮರಗಳನ್ನು ತರಿದವರಿದ್ದಾರೆ, ಕಡಿದವರಿದ್ದಾರೆ. ಬೇರುಗಳಿಗೆ ಆ್ಯಸಿಡ್ ಉಣಿಸಿ ಮರಗಳನ್ನು ವ್ಯವಸ್ಥಿತವಾಗಿ ಕೊಂದ ಮಹಾನುಭಾವರಿಗೂ ಕೊರತೆಯಿಲ್ಲ.

ಅಂಗಳದಲ್ಲೋ ಹಿತ್ತಲಿನಲ್ಲೋ ಹೂಗಿಡಗಳನ್ನು ಬೆಳೆಸುವುದು ನಮಗೆ ಆಗದು. ಆದರೆ, ಯಾರದೋ ಅಂಗಳದಲ್ಲಿ ಅರಳಿ ನಗುವ ಹೂಗಳ ಕಂಡರೆ ನಮ್ಮ ಕೈಗಳಿಗೆ ತುರಿಕೆ; ಯಾರದೋ ಬೆವರ ಫಲವನ್ನು ಕೊಂಚವೂ ಎಗ್ಗಿಲ್ಲದೆ ತುಡುವು ಮಾಡುತ್ತೇವೆ. ಕಳವಿನ ಹೂಗಳ ದೇವರಿಗಿಟ್ಟು ಒಳಿತು ಮಾಡೆಂದು ಪ್ರಾರ್ಥಿಸುತ್ತೇವೆ. ಇದು ನಮ್ಮ ನೈತಿಕತೆ! ಇದು ನಮ್ಮ ಪರಿಸರ ಪ್ರೇಮ!

ಮನೆಯ ಸುತ್ತಮುತ್ತ ಗಿಡಗಳೇ ಇಲ್ಲ ಎಂದಮೇಲೆ ನಮ್ಮ ಸುತ್ತ ಮರಳುಗಾಡಿನ ಮಿನಿಯೇಚರ್ ಒಂದನ್ನು ನಾವು ಸೃಷ್ಟಿಸಿಕೊಂಡಿದ್ದೇವೆ ಎಂದೇ ಅರ್ಥ. ಮಣ್ಣು ಹಾಗೂ ಮರಗಿಡಗಳಿದ್ದಾಗ ಮಳೆಯ ನೀರು ಇಂಗುತ್ತದೆ. ಅಂತರ್ಜಲವಾಗಿ ಬದಲಾಗುತ್ತದೆ. ದುರದೃಷ್ಟವಶಾತ್, ಲಕ್ಷ ಲಕ್ಷ ರೂಪಾಯಿ ಖರ್ಚು ಮಾಡಿ ಬೋರ್‌ವೆಲ್‌ಗಳನ್ನು ಕೊರೆಸುವುದರಲ್ಲಿ ಆಸಕ್ತಿಯಿರುವ ನಮಗೆ, ಆ ಕೊಳವೆಬಾವಿಗಳಿಗೆ